1. ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಬಂಡವಾಳ ಹೂಡಿಕೆ ಮೇಲೆ ಶೇ. 20ರಷ್ಟು ಸಹಾಯಧನ (ಗರಿಷ್ಟ ಮಿತಿ ರೂ. 10 ಲಕ್ಷ)

2. ಪರಿಶಿಷ್ಟ ಜಾತಿ/ಪಂಗಡ ಮತ್ತು ಮಹಿಳಾ ಉದ್ಯಮಿಗಳಿಗೆ ಶೇ. 5ರಷ್ಟು ಹೆಚ್ಚುವರಿ ಸಹಾಯಧನ (ಗರಿಷ್ಠ ಮಿತಿ ರೂ. 1 ಲಕ್ಷ)

3. ಕೈಗಾರಿಕೆಯ ಅನುಷ್ಠಾನಕ್ಕಾಗಿ ಪ್ರಥಮ ಮೂರು ವರ್ಷಗಳಲ್ಲಿ ಖರೀದಿಸುವ ಯಂತ್ರೋಪಕರಣ ಮೇಲಿನ ಪ್ರವೇಶ ತೆರಿಗೆ ವಿನಾಯಿತಿ ಹಾಗೂ ಪ್ರಥಮ ಐದು ವರ್ಷಗಳ ಅವಧಿಗೆ ಕಚ್ಚಾ ಸಾಮಗ್ರಿ ಖರೀದಿ ಮೇಲಿನ ಪ್ರವೇಶ ತೆರಿಗೆ ವಿನಾಯಿತಿ.

4. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಕೈಗಾರಿಕ ಉಪಯೋಗಕ್ಕಾಗಿ ಖರೀದಿಸಿದ ಜಮೀನಿನ ಮೇಲೆ ತಗಲುವ ಭೂ ಪರಿವರ್ತನ ಶುಲ್ಕ ವಿನಾಯಿತಿ (ಗರಿಷ್ಠ ಮಿತಿ 2 ಎಕರೆ).

ಪ್ರಸಕ್ತ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ರೋಜಗಾರ ಯೋಜನೆಯಡಿ 400 ನಿರುದ್ಯೋಗಿ ಯುವಕ/ಯುವತಿಯರಿಗೆ ಕೈಗಾರಿಕೆ/ ಸೇವೆ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗ ಕಲ್ಪಿಸಿಕೊಡುವ ಗುರಿ ಇದ್ದು, ಈಗಾಗಲೆ 285 ಅಭ್ಯರ್ಥಿಗಳಿಗೆ ವಾಣಿಜ್ಯ ಬ್ಯಾಂಕುಗಳಿಂದ ರೂ. 98.26 ಲಕ್ಷ ಆರ್ಥಿಕ ನೆರವು ಮಂಜೂರು ಮಾಡಲಾಗಿದೆ. ವಿಸ್ವ ಯೋಜನೆಯಡಿ 24 ಸಾಮೂಹಿಕ ಕಾರ್ಯಗಾರಗಳನ್ನು ನಿರ್ಮಿಸಲಾಗಿದೆ. ಸ್ಥಳೀಯ ಜನರಿಗೆ ಉದ್ಯಮಶೀಲತ ತರಬೇತಿ ನೀಡಿ ಕೈಗಾರಿಕಾ ಕ್ಷೇತ್ರದಲ್ಲಿ ತೊಡಗಿಸುವ ದೃಷ್ಟಿಯಿಂದ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಕೇಂದ್ರವನ್ನು ಈಗಾಗಲೇ ಜಾಮರಾಜನಗರದಲ್ಲಿ ತೆರೆಯಲಾಗಿದೆ. ಕೊಳ್ಳೇಗಾಲ, ಚಾಮರಾಜನಗರ ಮತ್ತು ಗುಂಡಲಪೇಟೆ ತಾಲ್ಲೂಕುಗಳಲ್ಲಿ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸುವ ಸಾಧ್ಯತೆಗಳ ಪರಿಶೀಲನೆಯಲ್ಲಿದೆ.

495(755): ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಖಾತೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿತ್ತಾಪುರ ತಾಲ್ಲೂಕಿನಲ್ಲಿ ಬರುವ ಪಶುವೈದ್ಯ ಆಸ್ಪತ್ರಗಳಲ್ಲಿ ಖಾಲಿ ಇರುವ ಸ್ಥಳಗಳೆಷ್ಟು;

ಆ) ಚಿತ್ತಾಪುರ ಸಹಾಯಕ ನಿರ್ದೇಶಕರ ಹುದ್ದೆ ಎಷ್ಟು ವರ್ಷಗಳಿಂದ ಖಾಲಿ ಇದೆ ಖಾಲಿ ಇರುವ ಹುದ್ದೆಯನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ ಎಷ್ಟು ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು.

ಇ) ರಾಜ್ಯದಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳೆಷ್ಟು ; ಬೇರೆ ಇಲಾಖೆಗಳಿಗಾಗಿ ಎಷ್ಟು ಜನ ಸಹಾಯಕ ನಿರ್ದೇಶಕರರ ಸೇವೆಯನ್ನು ಎರವಲು ಸೇವೆ ಆದಾರದ ಮೇಲೆ ನೀಡಲಾಗಿದೆ.

ಈ) ಇವರು ಎರವಲು ಸೇವೆಯನ್ನು ರದ್ದು ಮಾಡುವ ಮೂಲಕ ಇಲಾಖೆಯಲ್ಲಿನ ತಾಲ್ಲೂಕು ಮಟ್ಟದಲ್ಲಿ ಇರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು; ಸರ್ಕಾರ ಈ ದಿಸೆಯಲ್ಲಿ ತಕ್ಷಣ ಕ್ರಮ ಕೈಗೊಳ್ಳುವುದು?

ಶ್ರೀ ಮಿರಾಜುದ್ದೀನ್.ಎನ್. ಪಟೀಲ(ಪಶುಸಂಗೋಪನೆ ಮತ್ತು ವಕ್ಫ ಖಾತೆ ಸಚಿವರು):

ಅ) ಪಶುವೈದ್ಯ ಆಸ್ಪತ್ರೆ ಚಿತ್ತಾಪುರದಲ್ಲಿ 6 ಹುದ್ದೆಗಳು ಖಾಲಿ ಇವೆ.

(ಸಹಾಯಕ ನಿರ್ದೇಶಕರು

ಪಶುವೈದ್ಯಾಧಿಕಾರಿ (ವಿಸ್ತಾರಣಾ)	–	1
ಪಶುವೈದ್ಯಕೀಯ ಮೇಲ್ವಚಾರಕರು	–	1
ಪಶುವೈದ್ಯಾಧಿಕಾರ (ಸಂಚಾರಿ ಪಶುಚಿಕಿತ್ಸಾಲಯ)	–	1
ಪಶುವೈದ್ಯಕೀಯ ಸಹಾಯಕರು	–	1
ಡಿ ದರ್ಜೆ ನೌಕರರು	–	1)

ಆ) ದಿನಾಂಕ 22–6–1996 ರಿಂದ ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇರುತ್ತದೆ.

54 ಪಶುವೈದ್ಯಾಧಿಕಾರಿಗಳ ವೃಂದದಿಂದ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡಿ ಹುದ್ದೆಗಳನ್ನು ಸದ್ಯದಲ್ಲಿಯೆ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತದೆ.

ಆ) 71 ಸಹಾಯಕ ನಿರ್ದೇಶಕರ ಹುದ್ದೆಗಳ ಖಾಲಿ ಇವೆ.

25 ಸಹಾಯಕ ನಿರ್ದೇಶಕರುಗಳು ಬೇರೆ ಇಲಾಖೆಗೆ ಎರವಲು ಸೇವೆಯಲ್ಲಿದ್ದಾರೆ.

ಈ) ಎರವಲು ಸೇವೆ ರದ್ದು ಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

496(48) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲಾ) ಮಾನ್ಯ ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ 3 ವರ್ಷಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಉನ್ನತ ಮಟ್ಟದ ಸಮಿತಿ ಎಷ್ಟು ಬಂಡವಾಳದ, ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿದೆ. (ಸಂಸ್ಥೆಯ ಹೆಸರು, ಕೈಗಾರಿಕೆ, ಸ್ವರೂಪ ಇತ್ಯಾದಿ ವಿವರ ನೀಡುವುದು).

ಆ) ವಿಶ್ವ ಬಂಡವಾಳ ಹೂಡಿಕೆ ಮೇಳ ಹಾಗೂ ಇತರೆ ಮೇಳಗಳ ಮೂಲಕ ಎಷ್ಟು ಕೈಗಾರಿಕೆಗಳನ್ನು ಪ್ರಾರಾಂಭಿಲಾಗಿದೆ: ಇದಕ್ಕೆ ಹರಿದು ಬಂದಿರುವ ಬಂಡವಾಳ ಎಷ್ಟು?

ಇ) ಈ ಕೈಗಾರಿಕೆಗಳಿಗೆ ಸರ್ಕಾರ ನೀಡಿರುವ ಸಹಾಯಗಳೆನು : (ಭೂಮಿ, ವಿದ್ಯುತ್, ತೆರಿಗೆ ವಿನಾಯಿತಿ ಇತರೆ ವಿವರ ನೀಡುವುದು)

ಈ) ಇದಲ್ಲದೆ ಕೈಗಾರಿಕೆ ಇಲಾಕೆಯ ಸಮಿತಿಯು ಎಷ್ಟು ಕೈಗಾರಿಕೆಗಳ ಪ್ರಾರಂಭಕ್ಕೆ ಅನುಮತಿ ನೀಡಿದೆ ಈ ಪೈಕಿ ಪ್ರಾರಂಭವಾಗಿರುವ ಕೈಗಾರಿಕೆಗಳು ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯ(ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ದಿನಾಂಕ 1–4–2001 ರಿಂದ 31–12–2004ರವರೆಗೆ ಉನ್ನತ ಮಟ್ಟದ ಸಮಿತಿಯು 65 ಯೋಜನೆಗಳಿಗೆ ಅನುಮತಿ ನೀಡಿದ್ದು ಇದರಲ್ಲಿ ರೂ. 46,682.54 ಕೋಟಿಗಳು ಬಂಡವಾಳದ ಹೂಡಿಕೆಯಾಗಲಿದೆ. (ವಿವರ ಲಗುತ್ತಿಸಲಾಗಿದೆ)

ಆ) ವಿಶ್ವ ಬಂಡವಾಳ ಹೂಡಿಕೆ ಮೇಳದಲ್ಲಿ ಅನುಮಮೋದನೆಗೊಂಡ ಯೋಜನೆಗಳಲ್ಲಿ 7 ಯೋಜನೆಗಳು ಕಾರ್ಯರಂಭಗೊಂಡಿವೆ ಮತ್ತು ಇದರಲ್ಲಿ ರೂ. 1,631.80 ಕೋಟಿ ಬಂಡವಾಳ ಹೂಡಿಕೆಯಾಗಲಿದೆ.

1. ಮೆ. ಪ್ರಭುಲಿಂಗೇಶ್ವರ ಶುಗರ್ ಲಿ. ಚೆಮಕಂಡಿ.